# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಬಿ.ಜಿ.ಪಾಟೀಲ್**
**(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1154**

**ಉತ್ತರಿಸಬೇಕಾದ ದಿನಾಂಕ : 18.03.2025**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಯಶಸ್ವಿನಿ ಯೋಜನೆಯು ಜಾರಿಯಲ್ಲಿದೆಯೇ; ಇದ್ದಲ್ಲಿ ಸದರಿ ಯೋಜನೆಯಡಿ ಯಾವ ಯಾವ ಖಾಯಿಲೆಗಳಿಗೆ ಚಿಕಿತ್ಸೆ/ ಶಸ್ತ್ರ ಚಿಕಿತ್ಸೆಗೆ ಅವಕಾಶ ನೀಡಲಾಗಿದೆ; | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳನ್ನೊಳಗೊಂಡಂತೆ ಕರ್ನಾಟಕ ರಾಜ್ಯಾದ್ಯಂತ ಯಶಸ್ವಿನಿ ಯೋಜನೆಯು ಜಾರಿಯಲ್ಲಿರುತ್ತದೆ.<br><br>ಯಶಸ್ವಿನಿ ಯೋಜನೆಯಡಿಯಲ್ಲಿ ಮುಖ್ಯವಾಗಿ ಹೃದಯಕ್ಕೆ ಸಂಬಂಧಿಸಿದ ರೋಗಗಳು, ಕಿವಿ, ಮೂಗು, ಗಂಟಲು ವ್ಯಾದಿಗಳು, ಕರುಳಿನ ಖಾಯಿಲೆಗಳು, ನರಗಳಿಗೆ ಸಂಬಂಧಿಸಿದ ಖಾಯಿಲೆಗಳು, ಕಣ್ಣಿನ ಖಾಯಿಲೆಗಳು, ಮೂಳೆ ರೋಗಗಳು, ಹೆರಿಗೆ ಹಾಗೂ ಸ್ತ್ರೀಯರಿಗೆ ಸಂಬಂಧಿಸಿದ ಖಾಯಿಲೆಗಳು ಮತ್ತು ಈ ಯೋಜನೆಯಡಿ ಇತರೆ ಅನುಸೂಚಿತ ಸಾಮಾನ್ಯ ರೋಗಗಳಿಗೆ ಸಂಬಂಧಿಸಿದಂತೆ ಒಟ್ಟು 1650 ಮೂಲ ಚಿಕಿತ್ಸೆಗಳು ಮತ್ತು 478 ಪೂರಕ ಚಿಕಿತ್ಸೆಗಳಾದ ICU ಮತ್ತು HDU ಚಿಕಿತ್ಸೆಗಳೂ ಸೇರಿ ಒಟ್ಟು 2128 ಚಿಕಿತ್ಸಾ ಸೌಲಭ್ಯಗಳನ್ನು ರಾಜ್ಯದ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಒದಗಿಸಲಾಗುತ್ತಿದೆ. |

| | | |
|---|---|---|
| ಆ) | ಸದರಿ ಯೋಜನೆಯಲ್ಲಿ ನೋಂದಾಯಿತ ಫಲಾನುಭವಿಗಳ ಸಂಖ್ಯೆ ಎಷ್ಟು; ಹಾಗೂ ಇದುವರೆವಿಗೆ ಚಿಕಿತ್ಸೆ ಪಡೆದವರ ಸಂಖ್ಯೆ ಎಷ್ಟು ಹಾಗೂ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರದ ನ್ಯೂನತೆಗಳಿಂದ ರೋಗಿಗಳಿಗೆ ಸಮರ್ಪಕ ಶಸ್ತ್ರ ಚಿಕಿತ್ಸೆ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ನ್ಯೂನತೆಯನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಯಶಸ್ವಿನಿ ಯೋಜನೆಯಡಿ 2023-24ನೇ ಸಾಲಿನಲ್ಲಿ 41.51 ಲಕ್ಷ ಸದಸ್ಯರು ನೋಂದಾಯಿಸಿಕೊಂಡಿರುತ್ತಾರೆ. 2024-25ನೇ ಸಾಲಿನಲ್ಲಿ ಯಶಸ್ವಿನಿ ನೋಂದಣಿ ಕಾರ್ಯ ಪ್ರಗತಿಯಲ್ಲಿದ್ದು, ದಿನಾಂಕ:12-03-2025ಕ್ಕೆ ಇದ್ದಂತೆ ಒಟ್ಟು 38 ಲಕ್ಷ ಸದಸ್ಯರು ನೋಂದಾಯಿಸಿಕೊಂಡಿರುತ್ತಾರೆ.<br><br>2023-24ನೇ ಸಾಲಿನಲ್ಲಿ ಯೋಜನೆಯಡಿ ಒಟ್ಟು 66,279 ಫಲಾನುಭವಿಗಳು ರೂ.108.75 ಕೋಟಿ ಮೊತ್ತದ ಚಿಕಿತ್ಸೆಯನ್ನು ಪಡೆದಿರುತ್ತಾರೆ. 2024-25ನೇ ಸಾಲಿನಲ್ಲಿ ಇಲ್ಲಿಯವರೆಗೆ (ಫೆಬ್ರುವರಿ ಅಂತ್ಯದವರೆಗೆ) 63,000 ಫಲಾನುಭವಿಗಳು ರೂ.107.50 ಕೋಟಿ ಮೊತ್ತದ ಚಿಕಿತ್ಸೆಯನ್ನು ಪಡೆದಿರುತ್ತಾರೆ.<br><br>ಯಶಸ್ವಿನಿ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಚಿಕಿತ್ಸೆಗಳ ದರಗಳು ಕಡಿಮೆ ಇದೆ ಎಂದು ತಿಳಿಸಿ ಕೆಲವು ಪ್ರತಿಷ್ಠಿತ/ಪ್ರಮುಖ ಆಸ್ಪತ್ರೆಗಳು ಯೋಜನೆ ವ್ಯಾಪ್ತಿಗೆ ಸೇರಿಕೊಂಡಿರುವುದಿಲ್ಲ.<br><br>ಆಸ್ಪತ್ರೆಗಳ ಆಕ್ಷೇಪಣೆಗಳನ್ನು ಪರಿಶೀಲಿಸಿ ಯಶಸ್ವಿನಿ ಯೋಜನೆಯಡಿ ಚಿಕಿತ್ಸೆಗಳ ದರ ಪರಿಷ್ಕರಿಸಲು ಸರ್ಕಾರವು ಡಾ॥ ಶ್ರೀನಿವಾಸ ಎನ್.ಟಿ. ಮಾನ್ಯ ಶಾಸಕರು, ಕೂಡ್ಲಗಿ, ವಿಧಾನಸಭಾ ಕ್ಷೇತ್ರ ಇವರ ಅಧ್ಯಕ್ಷತೆಯಲ್ಲಿ ಚಿಕಿತ್ಸೆಗಳ ದರ ಪರಿಷ್ಕರಣಾ ತಜ್ಞರ ಸಮಿತಿಯನ್ನು ದಿನಾಂಕ:26-08-2024 ರಂದು ರಚಿಸಿದ್ದು, ಸದರಿ ಸಮಿತಿಯು ದರ ಪರಿಷ್ಕರಣಾ ಸಂಬಂಧ ಪರಿಶೀಲನಾ ಕಾರ್ಯ ಕೈಗೊಂಡಿದ್ದು, ಪರಿಶೀಲನಾ ಕಾರ್ಯ ಅಂತಿಮ ಹಂತದಲ್ಲಿದ್ದು, ಮಾರ್ಚ್-2025 ರ ಅಂತ್ಯದೊಳಗೆ ವರದಿ ಸಲ್ಲಿಸಲಿದ್ದು, ಸಮಿತಿ ವರದಿಯಲ್ಲಿನ ಶಿಫಾರಸ್ಸುಗಳ ಆಧಾರದ ಮೇಲೆ ದರ ಪರಿಷ್ಕರಣೆ ಬಗ್ಗೆ ಪರಿಶೀಲಿಸಲಾಗುವುದು.<br><br>ಆಸ್ಪತ್ರೆಗಳ ವಿಷಯವನ್ನು ಹೊರತುಪಡಿಸಿ ಯಶಸ್ವಿನಿ ಯೋಜನೆಯಲ್ಲಿ ಯಾವುದೇ ಲೋಪದೋಷಗಳು ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

<table>
<tr>
<td>ಇ)</td>
<td>ಆಯುಷ್ಮಾನ್ ಭಾರತ್ ಹಾಗೂ ಯಶಸ್ವಿನಿ ಯೋಜನೆಗಳಿರುವ ವ್ಯತ್ಯಾಸವೇನು?</td>
<td>ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಯೋಜನೆ ಮತ್ತು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಗಳಲ್ಲಿರುವ ಇರುವ ವ್ಯತ್ಯಾಸ.
<table>
<tr><th>ಕ್ರ. ಸಂ.</th><th>ಯಶಸ್ವಿನಿ ಯೋಜನೆ</th><th>ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ</th></tr>
<tr><td>1</td><td>ರಾಜ್ಯದ ಯಾವುದಾದರೂ ಸಹಕಾರ ಸಂಘದ/ಸಹಕಾರಿ ಸ್ವ-ಸಹಾಯ ಗುಂಪಿನ ಸದಸ್ಯರು ಮತ್ತು ಅವರ ಅವಲಂಬಿತ ಅರ್ಹ ಕುಟುಂಬ ಸದಸ್ಯರು ಮಾತ್ರ ಯೋಜನೆ ಸೌಲಭ್ಯ ಪಡೆಯಲು ಅವಕಾಶವಿದೆ.</td><td>ಸಾರ್ವತ್ರಿಕವಾಗಿ ಎಲ್ಲರೂ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಗೆ ಸದಸ್ಯರಾಗಲು ಅವಕಾಶವಿದೆ.</td></tr>
<tr><td>2</td><td>ಎಪಿಎಲ್ ಮತ್ತು ಬಿಪಿಎಲ್ ಎಂಬ ಯಾವುದೇ ವ್ಯತ್ಯಾಸವಿಲ್ಲದೆ ಯಶಸ್ವಿನಿ ಯೋಜನೆಯಲ್ಲಿ ಫಲಾನುಭವಿಗಳಿಗೆ ಉಚಿತ ಚಿಕಿತ್ಸೆ ಸೌಲಭ್ಯವಿದೆ.</td><td>ಬಿಪಿಎಲ್ ಕಾರ್ಡುದಾರರಿಗೆ ಉಚಿತ ಸೌಲಭ್ಯವಿದೆ. ಎಪಿಎಲ್ ಕಾರ್ಡುದಾರರ ಚಿಕಿತ್ಸೆಯಲ್ಲಿ ಶೇ.30ರಷ್ಟು ರಿಯಾಯಿತಿ ಇರುತ್ತದೆ.</td></tr>
<tr><td>3</td><td>ಯಶಸ್ವಿನಿ ಯೋಜನೆಯಡಿ ರೆಫರಲ್ ವ್ಯವಸ್ಥೆ ಇರುವುದಿಲ್ಲ. ಸದಸ್ಯರು ನೆಟ್‌ವರ್ಕ್ ಆಸ್ಪತ್ರೆಗಳಾಗಿ ನೋಂದಣಿ ಮಾಡಿಕೊಂಡಿರುವ ಸರ್ಕಾರಿ ಆಸ್ಪತ್ರೆಗಳು ಸೇರಿದಂತೆ ಖಾಸಗಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ / ಶಸ್ತ್ರ ಚಿಕಿತ್ಸೆಗೆ ಸೌಲಭ್ಯ ಪಡೆಯಲು ಅವಕಾಶ ಇರುತ್ತದೆ.</td><td>ರೆಫರಲ್ ವ್ಯವಸ್ಥೆ ಇರುತ್ತದೆ.</td></tr>
</table>
</td>
</tr>
</table>

**ಸಂಖ್ಯೆ: ಸಿಒ 81 ಸಿಎಲ್‌ಎಸ್ 2025**

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು